**ಮೇಷ್ಟ್ರು:** ಈ ನಮ್ಮ ತರಗತಿಯಲ್ಲಿ ಅತಿ ಹೆಚ್ಚು ಬಾರಿ ಬಳಸುವ ಶಬ್ದ ಯಾವುದು?
**ಕಿಟ್ಟಿ:** ಗೊತ್ತಿಲ್ಲ ಸರ್!
**ಮೇಷ್ಟ್ರು:** ನಿನ್ನ ಉತ್ತರ ಸರಿಯಾಗಿದೆ, ಕುಳಿತುಕೊ.

**ಗುಂಡ:** ನಾನು ಸತ್ತ ಮೇಲೆಯೂ ಎಲ್ಲರೂ ನನ್ನ ಸುತ್ತಲೇ ಇರಬೇಕು ಅಂದ್ರೆ ಏನು ಮಾಡಬೇಕು ಅಂತ ಸಲಹೆ ಕೊಡು.
**ಕಿಟ್ಟಿ:** ಅಷ್ಟೆನಾ ಅದು ತುಂಬಾ ಸುಲಭ. ನಿನ್ನನ್ನು ಸಮಾಧಿ ಮಾಡುವ ಜಾಗವನ್ನು ನೀನೇ ಗುರುತಿಸಿ, ಸಮಾಧಿಯ ಮೇಲೆಯೇ ವೈಫೈ ಹಾಕಿಸಿಬಿಡು. ಜನರೆಲ್ಲರೂ ನಿನ್ನ ಸುತ್ತಲೇ ಇರುತ್ತಾರೆ. ಊಟ ತಿಂಡಿನೂ ಅಲ್ಲೇ ಮಾಡಿ ಬಿಡುತ್ತಾರೆ.



ಸರ್ಕಾರಿ ಕಚೇರಿಗಳ ಬಾಗಿಲುಗಳ ಮೇಲೆ 'ತಳ್ಳಿ' ಎಂದು ಬರೆದಿರುವುದನ್ನು ನೋಡಿದ ವಿಶ್ವ, ಅಲ್ಲಿ ನಿಂತಿದ್ದ ಗುಮಾಸ್ತನನ್ನು ಹೀಗೆ ಕೇಳಿದ.
**ವಿಶ್ವ:** ಏನಯ್ಯಾ ಇದು, ನಿಮ್ಮ ಕಚೇರಿಯ ಎಲ್ಲಾ ಬಾಗಿಲುಗಳ ಮೇಲೆ 'ತಳ್ಳಿ' ಎಂದು ಬರೆದಿದ್ದಾರೆ?
**ಗುಮಾಸ್ತ:** ಈಗ ನೀವು ಒಳಗೆ ಹೋಗೋ ಮೊದಲು ನನಗೆ 50 ರೂಪಾಯಿ 'ತಳ್ಳಿ'. ಒಳಗೆ ಹೋದ ಮೇಲೆ ನಮ್ಮ ಬಾಸ್ ಸಹ 'ತಳ್ಳಿ' ಎಂದೇ ಕೇಳುತ್ತಾರೆ. ನೀವು ಒಳಗಿಂದ ಈಚೆಗೆ ಬರುವಾಗಲೂ 'ತಳ್ಳಿ' ಎಂದೇ ಬರೆದಿರುತ್ತದೆ.

(ತವರು ಮನೆಗೆ ಹೋಗಿ ಬಂದ ಹೆಂಡತಿಯನ್ನು ಬಾಗಿಲಲ್ಲಿ ನೋಡಿದ ಗುಂಡ ಗಹಗಹಿಸಿ ನಗಲು ಶುರು ಮಾಡಿದ)
**ಹೆಂಡತಿ:** ಅಯ್ಯೋ ಯಾಕೆ ಹೀಗೇ ನಗುತ್ತಿದ್ದೀರಿ?
**ಗುಂಡ:** ಈಗ ತಾನೇ ಸ್ವಲ್ಪ ಹೊತ್ತಿಗೆ ಮುಂಚೆ ಒಬ್ಬ ಸ್ವಾಮೀಜಿ ಬಂದು, 'ಯಾವುದೇ ಆಪತ್ತು ಬಂದರೂ ನಗು ನಗುತ್ತಾ ಬರಮಾಡಿಕೊಳ್ಳಬೇಕು' ಎಂದು ಶಾಸ್ತ್ರ ಹೇಳಿ ಹೋಗಿದ್ದರು. ಅದಕ್ಕೆ ನಗುತ್ತಿದ್ದೇನೆ.

**ರಂಗ:** ನಾನು ನನ್ನ ಹೆಂಡತಿಯನ್ನು ತುಂಬಾ ತುಂಬಾ ಪ್ರೀತಿಸುತ್ತೇನೆ. ಅಂದ ಹಾಗೆ ನೀನು?
**ಕಿಟ್ಟಿ:** ಅವಳು ನಿನ್ನ ಹೆಂಡತಿ ಕಣಯ್ಯಾ, ಅದು ಹೇಗೆ ನಾನು ಪ್ರೀತಿಸುವುದು?

**ಕಿಟ್ಟಿ:** ನನ್ನ ಹೆಂಡತಿಗೆ ಒಂದು ಜೊತೆ ಚಪ್ಪಲಿ ಕೊಡಿ.
ಸೇಲ್ಸ್‌ಮ್ಯಾನ್: ಸೈಜ್ ಎಷ್ಟು ಸಾರ್?
**ಕಿಟ್ಟಿ:** 7ನೆಯ ನಂಬರ್ ಅದ್ರಿಂದ ಹೊಡೆದರೆ ಸ್ವಲ್ಪವೂ ನೋವಾಗಬಾರದು. ಅಂತಹ ಮೆತ್ತಗಿರುವ ಚಪ್ಪಲಿ ಕೊಡಿ.

**ಗುಂಡ:** ನನಗೆ ನಿಮ್ಮ ಸರ್ಟಿಫಿಕೇಟ್ ಬೇಕು, ಸಾರ್ ಕೊಡಿ.
**ಡಾಕ್ಟರ್:** ಹಂಗಂದ್ರೆ ಹೇಗೆ? ನನ್ನ ಸರ್ಟಿಫಿಕೇಟ್ ನಿನಗೇಕೆ ಕೊಡಬೇಕು?
**ಗುಂಡ:** ನಾನು 15 ದಿನ ಕೆಲಸಕ್ಕೆ ರಜೆ ಹಾಕಿ ಮಜಾ ಮಾಡಿಬಿಟ್ಟಿದ್ದೆ. ಈಗ ನಮ್ಮ ಸಾಹೇಬರು ಡಾಕ್ಟರ್ ಸರ್ಟಿಫಿಕೇಟ್ ತಗೊಂಡೇ ಬರಬೇಕು ಅಂತ ಕಟ್ಟು ನಿಟ್ಟಾಗಿ ಹೇಳಿದ್ದಾರೆ. ಹೀಗಾಗಿ ನಿಮ್ಮ ಸರ್ಟಿಫಿಕೇಟ್ ಕೊಡಿ.

**ಶೀನ:** ಡಾಕ್ಟ್ರೆ, ನೀವು ಈ ಚೀಟಿಯಲ್ಲಿ ಬರೆದು ಕೊಟ್ಟ ಎಲ್ಲಾ ಮಾತ್ರೆಗಳು ಸಿಕ್ಕಿದವು. ಆದರೆ ಇಲ್ಲಿ ಕೆಳಗೆ ಕೊನೆ ಲೈನ್‌ನಲ್ಲಿ ಬರೆದದ್ದು ಮಾತ್ರ ಎಲ್ಲೂ ಸಿಗಲೇ ಇಲ್ಲ.
**ಡಾಕ್ಟರ್:** ಅದಾ, ಬರೆಯೋ ಹೊತ್ತಿಗೆ ಪೆನ್ನು ಸರಿಯಾಗಿ ಬರೀಲಿ ಅಂತಾ ಹಾಗೇ ಸ್ವಲ್ಪ ಗೀಚಿದ್ದೆ.




**ಅಪ್ಪ:** ಈಗ ನಿನ್ನನ್ನ ನೋಡಲು ಹೆಣ್ಣಿನ ಕಡೆಯವರು ಬರ್ತಿದ್ದಾರೆ. ಅವರು ಒಳಗೆ ಬಂದ ಮೇಲೆ ಅವರೆದುರು ಒಂದು ದೊಡ್ಡ ಸುಳ್ಳು ಹೇಳಬೇಕು.
**ಮಗ:** ಅಷ್ಟೇನಾ, ಅದೇನು ಮಹಾ. ಹೇಳುತ್ತೇನೆ ಬಿಡಿ ಅಪ್ಪ.
(ಹೆಣ್ಣಿನ ಕಡೆಯವರು ಬಂದು ಮಾತು ಕಥೆ ಆಡುತ್ತಾ ಕೂತರು)
**ಮಗ:** ಅಪ್ಪ, ಸ್ವಲ್ಪ ನಮ್ಮ ರೈಲಿನ ಬೀಗದ ಕೀ ಕೊಡಿ, ಬಹಳ ಹೊತ್ತಿನಿಂದ ಬಿಸಿಲಲ್ಲಿಯೇ ನಿಂತು ಬಿಟ್ಟಿದೆ. ಅದನ್ನು ನಮ್ಮ ಗ್ಯಾರೇಜ್‌ನಲ್ಲಿ ಬಿಟ್ಟು ಬರುತ್ತೇನೆ.

**ನಾಣಿ:** ಓಟು ಹಾಕುವುದಕ್ಕೆ 18 ವರ್ಷ ಸಾಕಂತೆ. ಆದರೆ ಮದುವೆ ಆಗೋಕೆ 21 ವರ್ಷ ಆಗಿರಲೇಬೇಕಂತೆ. ಇದು ಭಾರೀ ಅನ್ಯಾಯ ಕಣಯ್ಯ.
**ವೆಂಕಿ:** ಪೆದ್ದು ಮುಂಡೆದೆ, ಸರ್ಕಾರಕ್ಕೂ ಗೊತ್ತು ಕಣೋ ದೇಶ ಆಳುವುದು ಸುಲಭ. ಆದರೆ ಹೆಂಡತಿಯನ್ನು ಸಂಭಾಳಿಸುವುದು ತುಂಬಾ ಕಷ್ಟ ಅಂತ. ಅದಕ್ಕೆ ಆ ಡಿಫರೆನ್ಸ್ ಇಟ್ಟವ್ರೆ.

**ಮ್ಯಾನೇಜರ್:** ನಿಮ್ಮ ಮೇಲೆ ಯಾರ್ಯಾರು ಅವಲಂಬಿತರಾಗಿದ್ದಾರೆ?
**ನಾಣಿ:** ನಾನು ಮತ್ತು ನನ್ನ ಹೆಂಡತಿ. ಒಬ್ಬ ಮಗ ಹಾಗೂ ನಮ್ಮ ಸರ್ಕಾರ.

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು